# ಮೋದಿ ಮೋಡಿ... ಹಣ ಹೂಡಿ!!!

ಷೇರು ಮಾರುಕಟ್ಟೆಯ ಸೂಚ್ಯಾಂಕ (Sensex) ಹೊಸ ಏರಿಕೆಯನ್ನು ಕಂಡಿದೆ. ಇದುವರೆಗಿನ ಎಲ್ಲಾ ದಾಖಲೆಗಳನ್ನು ಷೇರು ಮಾರುಕಟ್ಟೆಯು ಮುರಿದಿದೆ. ಸೂಚ್ಯಾಂಕ ಏರುತ್ತಿದ್ದಂತೆಯೇ ಹೊಸ ಹೊಸ ಮಾರ್ಕೆಟ್ ಗುರುಗಳು ಹುಟ್ಟುತ್ತಿದ್ದಾರೆ ಮತ್ತು ತಮ್ಮದೇ ಆದ ಕಥೆಗಳನ್ನು ಹೆಣೆಯುತ್ತಿದ್ದಾರೆ. ಮಾರುಕಟ್ಟೆ ಮತ್ತಷ್ಟು ಏರಲಿದೆ ಎಂದು ಅಭಿಪ್ರಾಯಿಸುತ್ತಿದ್ದಾರೆ. ಆದರೆ ಯಾಕೆ ಮತ್ತು ಹೇಗೆ ಸೂಚ್ಯಾಂಕ ಏರಲಿದೆ ಎಂದು ಮಾತ್ರ ಅವರು ವಿವರಿಸುತ್ತಿಲ್ಲ.

ವಿಶ್ವದ ರಾಷ್ಟ್ರಗಳ GDP ಯು ಬಹಳ ಕಡಿಮೆ ಇದ್ದಾಗ ಕೂಡಾ ನಮ್ಮ ದೇಶದ GDP ಮಾತ್ರ ಧನಾತ್ಮಕವಾಗಿತ್ತು. ಕೇಂದ್ರದಲ್ಲಿ ಏಕಪಕ್ಷೀಯ ಸದೃಢ ಹಾಗೂ ಬಲಿಷ್ಠ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಹಾಗೂ ಈ ಸರ್ಕಾರದ ಮುಖ್ಯ ಘೋಷಣೆಯೇ "ಸಮೃದ್ಧ ಭಾರತ" ಎಂದಿರುವುದರಿಂದ ಈ GDP ಇನ್ನಷ್ಟು ಸುಧಾರಿಸುವಲ್ಲಿ ಎರಡು ಮಾತಿಲ್ಲ!!!

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶ ಮಾರುಕಟ್ಟೆಯ ಸೂಚ್ಯಾಂಕದ ಏರಿಕೆಗೆ ಉತ್ತಮ ಸಂಕೇತವನ್ನು ನೀಡಿದೆ. ಕೆಲವು ಮಾರ್ಕೆಟ್ ಗುರುಗಳು ಸೂಚ್ಯಾಂಕ (Sensex) ೪೦೦೦೦ ದ ಗಡಿಯನ್ನು ದಾಟುತ್ತದೆಯೆಂದರೆ, ಇನ್ನು ಕೆಲವರು ೬೦೦೦೦ ದ ಗಡಿಯನ್ನು ದಾಟಲಿದೆ ಎಂದು ಅಭಿಪ್ರಾಯಿಸುತ್ತಿದ್ದಾರೆ. ಒಂದು ಮಾತಂತೂ ಸತ್ಯ. ಎಲ್ಲರೂ ಕೂಡಾ ಮಾರುಕಟ್ಟೆಯ ಸೂಚ್ಯಾಂಕ (Sensex) ಏರಲಿದೆ ಎಂದೇ ಒಮ್ಮತದ ಅಭಿಪ್ರಾಯವನ್ನು ನೀಡುತ್ತಿದ್ದಾರೆ.

Market Cap to GDP ratio - ವನ್ನು ಮನಸ್ಸಿನಲ್ಲಿಟ್ಟುಕೊಂಡು Sensex Level ನ ಸಾಧ್ಯತೆಗಳನ್ನು ಒಂದು ತಾರ್ಕಿಕ ವಿವರಣೆಯಿಂದ ಅರ್ಥ ಮಾಡಿಕೊಳ್ಳೋಣ. ಜಗತ್ತಿನ ಸುಪ್ರಸಿದ್ಧ ಇನ್ವೆಸ್ಟ್‌ಮೆಂಟ್ ಗುರು ಎಂದೇ ಹೆಸರಾದ ವಾರೆನ್ ಬಫೆಟ್ ಮಾರುಕಟ್ಟೆಯ ಮೌಲ್ಯವನ್ನು ತಿಳಿದುಕೊಳ್ಳಲು ಬಳಸುತ್ತಿದ್ದ ವಿಧಾನವಿದು. ಇತಿಹಾಸವನ್ನು ಗಮನಿಸಿದರೆ ಮಾರುಕಟ್ಟೆಯ ಸೂಚ್ಯಾಂಕ (Sensex) ಒಂದು ಹಂತದಿಂದ ಇನ್ನೊಂದು ಹಂತಕ್ಕೆ ನಿರಂತರವಾಗಿ ಏರುತ್ತಲೇ ಹೋಗುವುದಿಲ್ಲ. ಅಲ್ಲಲ್ಲಿ ಇಳಿತಗಳು ಇರುತ್ತದೆ ಕೂಡ. ಈ ವಿಶ್ಲೇಷಣೆ ದೀರ್ಘ ಕಾಲದ ಸಾಧ್ಯತೆಗಳನ್ನು ನೀಡುತ್ತದೆ.

ನವಂಬರ್ ೨೦೦೭ ರಲ್ಲಿ US $ 1 Trillion ಯಿದ್ದ ನಮ್ಮ ದೇಶದ GDP, ಇಂದು US $ 2.16 Trillion ನಷ್ಟು ಇದೆ. ಇದು ಅತ್ಯದ್ಭುತವಾದ ಅಭಿವೃದ್ಧಿಯಾಗಿದ್ದು, ಈ ಹಂತವನ್ನು ನಾವು ಇಷ್ಟು ಬೇಗನೇ ತಲುಪುತ್ತೇವೆಂದು ಯಾರೂ ಕೂಡಾ ಕನಸ್ಸು ಮನಸ್ಸಿನಲ್ಲಿಯೂ ಎಣಿಸಿರಲಾರರು. GDP ಯ ಈಗಿನ ಗಾತ್ರವನ್ನು ನೋಡಿದರೆ ಪ್ರಪಂಚದ ಹತ್ತು ರಾಷ್ಟ್ರಗಳಲ್ಲಿ ನಮ್ಮ ದೇಶವೂ ಕೂಡಾ ಒಂದಾಗಿದೆ. 2007 ರಿಂದ 9 % ರಷ್ಟು ಅಭಿವೃದ್ಧಿಯನ್ನು ನಾವು ಹೊಂದಿದ್ದರೆ, 2024 ರ ಹೊತ್ತಿಗೆ ನಮ್ಮ GDP US $ 5 Trillion ತಲುಪುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ.

ನಮ್ಮ ಅಭಿವೃದ್ಧಿ ದರ 9 % ದಿಂದ ಪ್ರಸಕ್ತ ಇರುವ 5 % ಗೆ ಇಳಿಕೆಯಾಗಿರುವುದು ನಮಗೆಲ್ಲಾ ಗೊತ್ತಿರುವ ಸಂಗತಿಯೇ. ಇದರ ಕಾರಣಗಳ ಬಗ್ಗೆ ಸಾಕಷ್ಟು ಬಾರಿ ಚರ್ಚೆಗಳಾಗಿವೆ. ನಮ್ಮ ರಾಷ್ಟ್ರದ ಜನರ ಮಹತ್ವಾಕಾಂಕ್ಷೆ ಮತ್ತು ಸಾಮರ್ಥ್ಯವನ್ನು ಅವಲೋಕಿಸಿದಾಗ ನಮ್ಮ ದೇಶ ಈಗಲೂ ಕೂಡಾ 7 % ಗಿಂತ ಜಾಸ್ತಿ ಅಭಿವೃದ್ಧಿಯನ್ನು ಹೊಂದಬಹುದು. ಒಂದು ವೇಳೆ ನಾವು 7 % ಅಭಿವೃದ್ಧಿಯಂತೆ ಪ್ರತೀ ವರ್ಷ ಮುಂದುವರಿದರೆ, 2024 ರ ಬದಲು 2027 ರ ಹೊತ್ತಿಗೆ ನಮ್ಮ GDP US $ 5 Trillion ತಲುಪುವುದು ನಿಸ್ಸಂದೇಹ.

ಒಂದು ನೈಜವಾದ ಮಾರುಕಟ್ಟೆ ಸನ್ನಿವೇಶದಲ್ಲಿ Market Cap to GDP ratio 1 ಅಥವಾ 0. 9 ರಷ್ಟಿರುತ್ತದೆ. ಪ್ರಸಕ್ತ Sensex level 25000 ಯಿದ್ದರೆ, Market Cap US $ 1. 5 Trillion ಹಾಗೂ GDP US $ 2. 16 ರಷ್ಟಿದೆ. Market Cap to GDP ratio 0. 70 ಆಗಿದೆ. ಐತಿಹಾಸಿಕ ಏರಿಕೆ 1. 65; ಐತಿಹಾಸಿಕ ಕನಿಷ್ಠ ಮಟ್ಟ 0. 41 ಹಾಗೂ ನೈಜ ಮಾರುಕಟ್ಟೆ ಮೌಲ್ಯ 0. 9 ರಷ್ಟಿದೆ.

www.oxpdf.com

ನಾನು ಮೂರು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇನೆ;

೧. ಉತ್ತಮ ಸನ್ನಿವೇಶ (Market Cap to GDP ratio of 1.5)

೨. ಕೆಟ್ಟ ಸನ್ನಿವೇಶ (Market Cap to GDP ratio of 0.4) ಹಾಗೂ

೩. ನೈಜ ಸನ್ನಿವೇಶ (Market Cap to GDP ratio of 0.9)

ಈ ಮೇಲ್ಕಂಡ ಸನ್ನಿವೇಶಗಳನ್ನು ಹಾಗೂ ಈ ವರ್ಷದ GDP ದರ 4. 5 % ಆರಂಭಿಸಿ 7 % – ಅನ್ನು ಉದಾಹರಣೆಯಾಗಿ ತೆಗೆದುಕೊಂಡು ಸಂಬಂಧಿಸಿದ Sensex level ಅನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಮೂರೂ ಉದಾಹರಣೆಗಳಲ್ಲಿ Sensex levels ಎಷ್ಟಿರಬಹುದು ಎಂದು ಈ ಕೆಳಕಂಡ ಅಂಕಿ – ಅಂಶ ನಿಮಗೆ ವಿವರಣೆಯನ್ನು ನೀಡುತ್ತದೆ.

Sensex level ನ ಸಾಧ್ಯತೆಗಳು:

| ವರ್ಷ | ಉತ್ತಮ ಸನ್ನಿವೇಶ | ಕೆಟ್ಟ ಸನ್ನಿವೇಶ | ನೈಜ ಸನ್ನಿವೇಶ |
|---|---|---|---|
| 2014 | 53061 | 14150 | 31837 |
| 2015 | 55714 | 14857 | 33428 |
| 2016 | 59057 | 15748 | 35434 |
| 2017 | 63191 | 16851 | 37914 |
| 2018 | 67930 | 18115 | 40758 |
| 2019 | 73364 | 19564 | 44019 |
| 2020 | 79600 | 21227 | 47760 |
| 2021 | 86764 | 23137 | 52059 |
| 2022 | 94139 | 25104 | 56484 |
| 2023 | 101671 | 27112 | 61002 |
| 2024 | 108788 | 29010 | 65273 |
| 2025 | 115859 | 30896 | 69515 |
| 2026 | 123390 | 32904 | 74034 |
| 2027 | 131410 | 35043 | 78846 |

Market Cap to GDP ratio of 0.69 ಅನ್ನು ನಾವು ಪರಿಗಣನೆಗೆ ತೆಗೆದುಕೊಂಡು ಹಾಗೂ ನಮ್ಮ GDP ದರ US $ 5. 00 Trillion ಆದರೆ ನಮ್ಮ ದೇಶದ Sensex level 50000 ಅನ್ನು ದಾಟುವುದರಲ್ಲಿ ದೂಸರಾ ಮಾತು ಇಲ್ಲ ಬಿಡಿ. ಆ ಸಂಖ್ಯೆ 0.69 ಅಥವಾ 0. 9 ಯಾ 1. 0 – ಅನ್ನು ದಾಟಿದರೆ ನಮ್ಮ Sensex ಸೂಚ್ಯಾಂಕ 80000 ವನ್ನು ದಾಟುವಲ್ಲಿ ನಿಮಗೆ ಸಂಶಯ ಇದೆಯಾ? ನನಗಂತೂ ಖಂಡಿತಾ ಇಲ್ಲ. ಅಸಾಧ್ಯ ಅಂತ ನಿಮಗನ್ನಿಸಬಹುದು!!! ನನಗೋ..... ಖಂಡಿತಾ ಇಲ್ಲ!!!!

ದೂರದೃಷ್ಟಿಯನ್ನು ಇಟ್ಟುಕೊಂಡು ಮಾರುಕಟ್ಟೆಯ ಏರಿಳಿತಗಳನ್ನು ನಾವು ಗಮನಿಸಿದರೆ ಮೇಲ್ಕಂಡ ಸನ್ನಿವೇಶ ಅಸಾಧ್ಯವಂತೂ ಅಲ್ಲವೇ ಅಲ್ಲ!!! ಹೌದು ತಾನೇ? ಇಂದು ನಾನು ಷೇರುಗಳನ್ನು ಖರೀದಿಸುತ್ತೇನೆ.... ನಾಳೆ ಮಾರುತ್ತೇನೆ... ನಾನು ಅದರಿಂದ ಲಾಭವನ್ನು ಗಳಿಸಿರಬಹುದು.... ಅದು ಶಾರ್ಟ್ ಟರ್ಮ್!!! ಕಳೆದ ಕೆಲವು ವರ್ಷಗಳಿಂದ ಷೇರು ಮಾರುಕಟ್ಟೆ ತನ್ನದೇ ಆದ ಕೆಲವು ಕಾರಣಗಳಿಂದ ನಷ್ಟವನ್ನು ಕಂಡಿದೆ. ನಾನು ಒಪ್ಪಿಕೊಳ್ಳುತ್ತೇನೆ ಕೂಡಾ. ನಮ್ಮ ದೇಶದ GDP 9 % – ಹೀಗೇ ಮುಂದುವರಿಯುತ್ತದೆ ಅಂತ ದಯವಿಟ್ಟು ನಿಮ್ಮ ಕನಸ್ಸು – ಮನಸ್ಸಿನಲ್ಲಿಯೂ

www.oxpdf.com

ಊಹಿಸಿಕೊಳ್ಳಬೇಡಿ. ಪಾತಾಳದಲ್ಲಿ ಮುಳುಗಿರುವ ನಮ್ಮ ದೇಶದ ಆರ್ಥಿಕತೆಯನ್ನು ನಮ್ಮ ಪ್ರಧಾನಿಗಳು ಮೇಲಕ್ಕೆ ತರುತ್ತಾರೆ ಎನ್ನುವ ಅಚಲ ವಿಶ್ವಾಸ ನಮ್ಮಲ್ಲಿ ಇದೆ. ನಮ್ಮ ದೇಶದ ಪ್ರತಿಯೊಬ್ಬ ಜನ ಸಾಮಾನ್ಯರ ಬಳಿ ಕೂಡಾ ಇದೆ.

ದಿವಂಗತ ರಾಜೀವ ಗಾಂಧಿಯವರ ನಂತರ 1984 ರಿಂದ ನಮ್ಮ ದೇಶವನ್ನು ಏಕಪಕ್ಷೀಯ ಸರ್ಕಾರ ಆಡಳಿತವನ್ನು ನಡೆಸಿಲ್ಲ. "ಅಬ್ ಕೀ ಬಾರ್ ಮೋದಿ ಸರ್ಕಾರ್" ಎಂದು ದೇಶದೆಲ್ಲೆಡೆ ಭರ್ಜರಿಯಾಗಿ ಪ್ರಚಾರ ನಡೆಸಿದ ನರೇಂದ್ರ ಮೋದಿ ನಮ್ಮ ರಾಷ್ಟ್ರದ ಪ್ರಧಾನಿ ಮಂತ್ರಿಯೆಂಬ ಸಿಂಹಾಸನದ ಗದ್ದುಗೆಯನ್ನು ಏರಿದ್ದಾರೆ. ಅವರು ಸರ್ಕಾರವನ್ನು ರಚಿಸುತ್ತಾರೆ ಎಂದ ದಿನದಿಂದಲೂ FII ಗ್ಳ ಹಣವಂತೂ ಹರಿದು ಬರುತ್ತಲೇ ಇದೆ. ಇನ್ನು ಮುಂದೂ ಅವರು ಮಾಡುತ್ತಾರೆ. ವಿದೇಶಿ ಬಂಡವಾಳವೇನು.... ನಮ್ಮ ದೇಶದ ಸಣ್ಣ ಪುಟ್ಟ ಹೂಡಿಕೆದಾರರೂ ಬಂಡವಾಳವನ್ನು ಹೂಡುತ್ತಾರೆಯೆನ್ನುವುದರಲ್ಲಿ ನನಗಂತೂ ಎಳ್ಳಷ್ಟೂ ಸಂದೇಹವಿಲ್ಲ. ರಸಾತಳವನ್ನು ತಲುಪಿರುವ ನಮ್ಮ ಆರ್ಥಿಕತೆಯನ್ನು ಉದ್ಧರಿಸುವ ವ್ಯಕ್ತಿ ನಮಗಿಂದು ಬೇಕಾಗಿದ್ದಾರೆ. ಆ ವ್ಯಕ್ತಿಯನ್ನು ನಾವು ಇಂದು ನರೇಂದ್ರ ದಾಮೋದರ ಮೋದಿಯಲ್ಲಿ ಕಾಣುತ್ತಿದ್ದೇವೆ!!!

ನನ್ನ ಮಾತನ್ನು ಕೇಳಿ... ನಾನಂತೂ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿ ಚೆನ್ನಾಗಿ ಸಂಪಾದಿಸಿಕೊಂಡಿದ್ದೇನೆ. ನೀವು....?

ಯಾಕೆ... ಆಲೋಚಿಸುತ್ತೀರಿ.....?

ಮಾಡಿ ಸ್ವಾಮಿ.....

ಹಣ ಹೂಡಲು ಇದು ಸರಿಯಾದ ಸಮಯ....

ಹಣ ಹೂಡಿ.....

ಯಾಕೆಂದರೆ

ದೇಶದೆಲ್ಲೆಡೆ ಇದೆ ಇಂದು ಮೋದಿಯ ಮೋಡಿ!!!

By

Sundeep J Pissay

Certified Financial Planner

Sri Samrudhi Investment Services

Ph: +919900940123

E-mail: samrudhi_nx@yahoo.in

www.oxpdf.com

www.oxpdf.com